# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:– ಶ್ರೀ ಕೆ.ಚಂದ್ರಶೇಖರಯ್ಯ, ಪ್ರಥಮ ದರ್ಜೆ ಸಹಾಯಕ (ನಿವೃತ್ತ) ಮತ್ತು ಶ್ರೀ ಎನ್.ಕೊಟ್ರಪ್ಪ, 'ಡಿ' ಗ್ರೂಪ್ (ನಿವೃತ್ತ) ನೌಕರರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 247(ಎ)ರ ಸೌಲಭ್ಯ ಮಂಜೂರು ಮಾಡುವ ಬಗ್ಗೆ – ಆದೇಶ.

ಓದಲಾಗಿದೆ:–1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಾವಣಗೆರೆ ರವರ ಪತ್ರ ಸಂಖ್ಯೆ : ಜಿಪಂದಾ / ಆ(2) / ಗ್ರಾಪಂ / ಸಿಆರ್ / 121 / 2015–16, ದಿನಾಂಕ : 30.12.2016.

2) ಸರ್ಕಾರದ ಆದೇಶ ಸಂಖ್ಯೆ : ಆಇ 9 ಎಸ್‌ಆರ್‌ಎ 2012, ದಿನಾಂಕ : 08.09.2016.

******

**ಪ್ರಸ್ತಾವನೆ:–**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಾವಣಗೆರೆ ರವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 30.12.2016ರ ಪತ್ರದ ಜೊತೆ ಈ ಕೆಳಕಂಡ ನಿವೃತ್ತ ನೌಕರರ ಮೂಲ ಸೇವಾ ಪುಸ್ತಕಗಳನ್ನು ಕಳುಹಿಸುತ್ತಾ, ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 247(ಎ)ರನ್ವಯ ಅರ್ಹತಾದಾಯಕ ಸೇವಾ ಸೌಲಭ್ಯವನ್ನು ನೀಡುವ ಬಗ್ಗೆ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ :–

1. ಶ್ರೀ ಎಸ್.ವಾಸುದೇವಚಾರ್, ಸಹಾಯಕ ಇಂಜಿನಿಯರ್–2 (ನಿವೃತ್ತ), ಹರಪನಹಳ್ಳಿ
2. ಶ್ರೀ ಕೆ.ಚಂದ್ರಶೇಖರಯ್ಯ, ಪ್ರಥಮ ದರ್ಜೆ ಸಹಾಯಕ (ನಿವೃತ್ತ), ಹರಪನಹಳ್ಳಿ
3. ಶ್ರೀ ಎನ್.ಕೊಟ್ರಪ್ಪ, 'ಡಿ' ಗ್ರೂಪ್ ನೌಕರ (ನಿವೃತ್ತ), ಹರಪನಹಳ್ಳಿ

ಆರ್ಥಿಕ ಇಲಾಖೆಯು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ:8.09.2016ರಂದು ಹೊರಡಿಸಿದ ಆದೇಶದಲ್ಲಿ ಪ್ರಾರಂಭದಲ್ಲಿ ದಿನಗೂಲಿ ಅಥವಾ ಮಿತವೇತನ ಪದವೀಧರರಾಗಿ ನೇಮಕಾತಿ ಹೊಂದಿ, ತದನಂತರ ಕ್ರಮಬದ್ಧಗೊಳಿಸಲಾದ ನೌಕರರು ದಿನಾಂಕ 14.02:2012ರ ಪೂರ್ವದಲ್ಲಿ ನಿವೃತ್ತರಾದ ನೌಕರರ ಪ್ರಕರಣಗಳಲ್ಲಿ ನಿವೃತ್ತಿ ಸಮಯದಲ್ಲಿ ಜಾರಿಯಲ್ಲಿದ್ದ ಕೆ.ಸಿ.ಎಸ್.ಆರ್ ನಿಯಮ 247(ಎ)ರಲ್ಲಿನ ಅವಕಾಶಗಳನ್ವಯ ಸಂಬಂಧಪಟ್ಟ ಎಲ್ಲಾ ಅಗತ್ಯ ಮಾಹಿತಿ / ದಾಖಲೆಗಳನ್ನು ಪರಿಶೀಲಿಸಿ, ಅರ್ಹ ಪ್ರಕರಣಗಳಲ್ಲಿ ಹೆಚ್ಚುವರಿ ಸೇವೆಯ ಸೇರ್ಪಡೆ ಅಧಿಕಾರವನ್ನು ಆಯಾ ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ರವರಿಗೆ ಪ್ರತ್ಯಾಯೋಜಿಸಲಾಗಿದೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿ ಮತ್ತು ದಾಖಲೆಗಳನ್ನು ಪರಿಶೀಲಿಸಿದೆ. ಮೇಲಿನ ನಿವೃತ್ತ ನೌಕರರ ಪೈಕಿ ಕ್ರಮ ಸಂಖ್ಯೆ (1)ರಲ್ಲಿನ ಶ್ರೀ ಎಸ್.ವಾಸುದೇವಚಾರ್ ರವರು ಮೂಲತಃ ಸಣ್ಣ ನೀರಾವರಿ ಇಲಾಖೆಗೆ ಸೇರಿದವರಾಗಿದ್ದರಿಂದ ಅವರ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಸೇರ್ಪಡೆ ಕುರಿತಂತೆ ಪರಿಶೀಲಿಸಲು ಮುಂದಿನ ಅಗತ್ಯಕ್ಕಾಗಿ ಸದರಿಯವರ ಮೂಲ ಸೇವಾ ಪುಸ್ತಕವನ್ನು ಸದರಿ ಇಲಾಖೆಗೆ ಕಳುಹಿಸಲಾಗಿದೆ.

ಇನ್ನುಳಿದಂತೆ, ಮೇಲಿನ ಕ್ರಮ ಸಂಖ್ಯೆ (2)ರಲ್ಲಿನ ಶ್ರೀ ಕೆ.ಚಂದ್ರಶೇಖರಯ್ಯ, ಪ್ರಥಮ ದರ್ಜೆ ಸಹಾಯಕ (ನಿ) ರವರು ಮೂಲತ: ದಿನಗೂಲಿ ಆಧಾರದ ಮೆಲೆ ನೇಮಕಾತಿ ಹೊಂದಿದ ನೌಕರರಾಗಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ರವರ ದಿನಾಂಕ : 03.01.1991ರ ಆದೇಶದ ಪ್ರಕಾರ ದಿನಾಂಕ : 01.01.1990ರಿಂದ ಸರ್ಕಾರಿ ಸೇವೆಯಲ್ಲಿ ಸಕ್ರಮಗೊಂಡು ಸೇವೆ ಸಲ್ಲಿಸಿ, ದಿನಾಂಕ : 30.11.2007ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿರುತ್ತಾರೆ. ಸದರಿಯವರು ನಿವೃತ್ತಿ ಹೊಂದುವ ದಿನಾಂಕಕ್ಕೆ ಒಟ್ಟಾರೆ 17 ವರ್ಷ 11 ತಿಂಗಳು ಅರ್ಹತಾದಾಯಕ ಸೇವೆ ಸಲ್ಲಿಸಿರುತ್ತಾರೆ.

ಅದರಂತೆ, ಮೇಲಿನ ಕ್ರಮ ಸಂಖ್ಯೆ (3)ರಲ್ಲಿನ ಶ್ರೀ ಎನ್.ಕೊಟ್ರಪ್ಪ, 'ಡಿ' ಗ್ರೂಪ್ ನೌಕರ (ನಿವೃತ್ತ) ರವರು ಮೂಲತ: ದಿನಗೂಲಿ ಆಧಾರದ ಮೆಲೆ ನೇಮಕಾತಿ ಹೊಂದಿದ ನೌಕರರಾಗಿದ್ದು, ಮುಖ್ಯ ಕಾಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರ ದಿನಾಂಕ : 29.05.1997ರ ಆದೇಶದ ಪ್ರಕಾರ ದಿನಾಂಕ ; 01.03.1994 ರಿಂದ 'ಡಿ' ಗುಂಪಿನ ನೌಕರರೆಂದು ಸರ್ಕಾರಿ ಸೇವೆಯಲ್ಲಿ ಸಕ್ರಮಗೊಂಡು ಸೇವೆ ಸಲ್ಲಿಸಿ, ದಿನಾಂಕ : 30.09.2007ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿರುತ್ತಾರೆ. ಸದರಿಯವರು ನಿವೃತ್ತಿ ಹೊಂದುವ ದಿನಾಂಕಕ್ಕೆ ಒಟ್ಟಾರೆ 13 ವರ್ಷ 9 ತಿಂಗಳು ಅರ್ಹತಾದಾಯಕ ಸೇವೆ ಸಲ್ಲಿಸಿರುತ್ತಾರೆ.

ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 247(ಎ)ರಲ್ಲಿ ಸ್ಪಷ್ಟಪಡಿಸಿರುವಂತೆ ದಿನಗೂಲಿ ಆಧಾರದ ನೌಕರರು ಸೇರಿದಂತೆ 30 ವರ್ಷಗಳ ನಂತರ ನೇಮಕಾತಿ ಹೊಂದಿದ ನೌಕರರಿಗೆ ಗರಿಷ್ಠ 2 ವರ್ಷಗಳ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ನೀಡಲು ಅವಕಾಶ ಇರುತ್ತದೆ. ಆದ್ದರಿಂದ, ಈ ಪ್ರಕರಣದಲ್ಲಿ ಸದರಿ ಇಬ್ಬರೂ ನಿವೃತ್ತ ನೌಕರರಿಗೆ 2 ವರ್ಷಗಳ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ನೀಡಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ : ಗ್ರಾಅಪ 53 ಜಿಪಅ 2017**
**ಬೆಂಗಳೂರು, ದಿನಾಂಕ. 06.03.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಕೆಳಕಂಡ ನಿವೃತ್ತ ನೌಕರರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 247(ಎ)ರ ಪ್ರಕಾರ 2 ವರ್ಷಗಳ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಸೇರ್ಪಡೆ ಮಾಡಲು ಮಂಜೂರಾತಿ ನೀಡಿದೆ.

1. ಶ್ರೀ ಕೆ.ಚಂದ್ರಶೇಖರಯ್ಯ, ಪ್ರಥಮ ದರ್ಜೆ ಸಹಾಯಕ (ನಿವೃತ್ತ), ಹರಪನಹಳ್ಳಿ
2. ಶ್ರೀ ಎನ್.ಕೊಟ್ರಪ್ಪ, 'ಡಿ' ಗ್ರೂಪ್ ನೌಕರ (ನಿವೃತ್ತ), ಹರಪನಹಳ್ಳಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ರಂಗನಗೌಡ) 06/03/2017
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಕಂದಾಯ ಭವನ, ಬೆಂಗಳೂರು

3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಾವಣಗೆರೆ – ಶ್ರೀ ಕೆ.ಚಂದ್ರಶೇಖರಯ್ಯ, ಪ್ರಥಮ ದರ್ಜೆ ಸಹಾಯಕ (ನಿವೃತ್ತ) ಮತ್ತು ಶ್ರೀ ಎನ್.ಕೊಟ್ರಪ್ಪ, 'ಡಿ' ಗ್ರೂಪ್ (ನಿವೃತ್ತ) ನೌಕರರ ಮೂಲ ಸೇವಾ ಪುಸ್ತಕಗಳನ್ನು ಇದರೊಂದಿಗೆ ಹಿಂದಿರುಗಿಸಲಾಗಿದೆ. ತಲುಪಿದ್ದಕ್ಕೆ ಸ್ವೀಕೃತಿ ನೀಡುವಂತೆ ಕೋರಿದೆ – ನೊಂದಾಯಿತ ಅಂಚೆ ಮೂಲಕ / ಸ್ವೀಕೃತಿ ಬಾಕಿ
5. ಸಂಬಂಧಿಸಿದ ನಿವೃತ್ತ ನೌಕರರಿಗೆ

ಪ್ರತಿ :

1. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸೇವೆಗಳು–1)
2. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಉಪಕಾರ್ಯದರ್ಶಿ (ಆಡಳಿತ) ಇವರ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು.
3. ಹೆಚ್ಚುವರಿ ಪ್ರತಿ : ರಕ್ಷಾ ಕಡತ : ಸೂಚನಾ ಫಲಕ : ಕಂಪ್ಯೂಟರ್ ಸೆಲ್.